2.	ದಂತ ವೈದ್ಯರು	–	1
3.	ಶುಶ್ರೂಷಕರು	–	16
4.	ಸೀನಿಯರ್ ಫಾರ್ಮಸಿಸ್ಟ್	–	1
5.	ಜೂನಿಯರ್ ಹೆಲ್ತ್ ಅಸಿಸ್ಟೆಂಟ್ಸ್ (ಮಹಿಳಾ)	–	3
6.	ಪ್ರಯೋಗ ಶಾಲಾ ತಂತ್ರಜ್ಞ	–	1
7.	ಎಕ್ಸರೇ ಟೆಕ್ನಿಷಿಯನ್	–	2
8.	ಲೇ ಸೆಕ್ರೆಟರಿ	–	1
9.	ಪ್ರಥಮ ದರ್ಜೆ ಸಹಾಯಕರು	–	2
10.	ದ್ವಿತೀಯ ದರ್ಜೆ ಸಹಾಯಕರು	–	2
11.	ಗ್ರೂಪ್ 'ಡಿ'	–	25
	ಒಟ್ಟು	–	**62**

ನೂರು ಹಾಸಿಗೆಗಳ ಆಸ್ಪತ್ರೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಮಂಜೂರು ಮಾಡಲು ನಾರ್ಮ್ಸ್‌ರನ್ವಯ ಕ್ರಮ ಕೈಗೊಳ್ಳಲಾಗುವುದು.

ಸುಳ್ಯ ತಾಲ್ಲೂಕಿನಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿ ಸೇರ್ಪಡೆಗೊಂಡಿರುವ ಪಂಚಾಯತ್‌ಗಳು

3499(4066) ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಯಾವ ಗ್ರಾಮ ಪಂಚಾಯತ್‌ಗಳು ಸೇರ್ಪಡೆಗೊಂಡಿದೆ? ಹಾಗೂ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ;

ಆ) ಇದರ ಅಂದಾಜು ವೆಚ್ಚವೆಷ್ಟು; ಪಂಚಾಯತ್‌ವಾರು ವಿವರ ನೀಡುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಸುಳ್ಯ ತಾಲ್ಲೂಕಿನ 9 ಗ್ರಾಮ ಪಂಚಾಯತ್‌ಗಳಲ್ಲಿನ 9 ಗ್ರಾಮಗಳಲ್ಲಿ ಸ್ವಚ್ಛ ಗ್ರಾಮ ಯೋಜನೆಯನ್ನು ಪ್ರತಿ ಗ್ರಾಮಕ್ಕೆ ತಲಾ ರೂ. 20.00 ಲಕ್ಷದಂತೆ ಒಟ್ಟು ರೂ. 180.00 ಲಕ್ಷಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಅನುಬಂಧ–1

ಕ್ರ. ಸಂ.	ತಾಲ್ಲೂಕು	ಗ್ರಾಮ ಪಂಚಾಯಿತಿ	ಗ್ರಾಮದ ಹೆಸರು	ಅನುಷ್ಠಾನ ಗೊಳಿಸುತ್ತಿರುವ ಸಂಸ್ಥೆ / ಇಲಾಖೆ	ಅಂದಾಜು ವೆಚ್ಚ
1.	ಸೂಳ್ಯ	ಬೆಳ್ಳಾರೆ	ಬೆಳ್ಳಾರೆ	ನಿರ್ಮಿತ ಕೇಂದ್ರ	20.00
2.		ಅಲ್ ಟೈ	ಅಲ್ ಟೈ	ನಿರ್ಮಿತ ಕೇಂದ್ರ	20.00
3.		ಕಲ್ಕಡ್ಕ	ಕಲ್ಕಡ್ಕ	ನಿರ್ಮಿತ ಕೇಂದ್ರ	20.00
4.		ಬಳ್ತೆ	ಬಳ್ತೆ	ನಿರ್ಮಿತ ಕೇಂದ್ರ	20.00
5.		ಬೆಳ್ಳಾರೆ	ಪೆರುವಾಜ್	ನಿರ್ಮಿತ ಕೇಂದ್ರ	20.00

ಕ್ರ. ಸಂ.	ತಾಲ್ಲೂಕು	ಗ್ರಾಮ ಪಂಚಾಯಿತಿ	ಗ್ರಾಮದ ಹೆಸರು	ಅನುಷ್ಠಾನ ಗೊಳಿಸುತ್ತಿರುವ ಸಂಸ್ಥೆ / ಇಲಾಖೆ	ಅಂದಾಜು ವೆಚ್ಚ
6.		ಕೊಡಿಯಾಲ	ಕೊಡಿಯಾಲ	ನಿರ್ಮಿತ ಕೇಂದ್ರ	20.00
7.		ಎಣ್ಮೂರು	ಎಣ್ಮೂರು	ನಿರ್ಮಿತ ಕೇಂದ್ರ	20.00
8.		ಕಲ್ಕಡ್ಕ	ನಂಬೆತ್ಯಾಡಿ	ನಿರ್ಮಿತ ಕೇಂದ್ರ	20.00
9.		ಗುತ್ತಿಗಾರು	ಗುತ್ತಿಗಾರು	ನಿರ್ಮಿತ ಕೇಂದ್ರ	20.00
				ಒಟ್ಟು	**180.00**

ಸೂಳ್ಯ ತಾಲ್ಲೂಕಿನಲ್ಲಿ ಶಾಲಾ–ಕಾಲೇಜುಗಳಲ್ಲೂ ಹುದ್ದೆಗಳ ಭರ್ತಿ

3500(4068) ಶ್ರೀ ಅಂಗಾರ ಎಸ್ (ಸೂಳ್ಯ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿವೆ; ಸದರಿ ಶಾಲೆ, ಕಾಲೇಜುಗಳಲ್ಲಿ ಎಷ್ಟು ಜನ ಅಧ್ಯಾಪಕರು ಇರಬೇಕಾಗಿತ್ತು; ಹಾಲಿ ಎಷ್ಟು ಖಾಲಿ ಇವೆ ವಿವರ ನೀಡುವುದು;

ಆ) ಸದರಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ ಎಷ್ಟು ಸಮಯದಲ್ಲಿ ಮಾಡಲಾಗುವುದು?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಸರ್ಕಾರಿ ಪ್ರೌಢಶಾಲೆಗಳು : 10

ಸರ್ಕಾರಿ ಪದವಿ ಪೂರ್ವ ಕಾಲೇಜುಗಳು : 04

ಸರ್ಕಾರಿ ಪ್ರೌಢಶಾಲೆಗಳಲ್ಲಿ ಇರಬೇಕಾದ ಶಿಕ್ಷಕರ ಸಂಖ್ಯೆ : 77

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಇರಬೇಕಾದ ಉಪನ್ಯಾಸಕರ ಸಂಖ್ಯೆ : 38

ಖಾಲಿ ಇರುವ ಪ್ರೌಢಶಾಲಾ ಶಿಕ್ಷಕರ ವಿವರ ಈ ರೀತಿ ಇದೆ:

ಕನ್ನಡ	3
ಹಿಂದಿ	9
ಕಲಾ	1
ಪಿ.ಸಿ.ಎಂ.	11
ಸಿ.ಬಿ.ಝಡ್	3
ಒಟ್ಟು	**27**

ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಸಂಖ್ಯೆ : 11

ಆ) ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಮಕ್ಕಳ ಪಾಠ ಪ್ರವಚನಕ್ಕೆ ತೊಂದರೆಯಾಗದಂತೆ ಹತ್ತಿರವಿರುವ ಶಾಲೆಗಳಿಂದ ನಿಯೋಜನೆ ಮಾಡುವಂತೆ ಸಂಬಂಧಿಸಿದ